ಶ್ರೀ ನಿಂಗಪ್ಪ ಹೆಚ್ (ಕುಣಿಗಲ್)118(224)

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಗ್ರಾಮೀಣ ಪ್ರದೇಶದಲ್ಲಿರುವ ಬಹಳಷ್ಟು ಜನ ಬಡವರು ನಿವೇಶನ ಮತ್ತು ಇಲ್ಲದೆ ಸಣ್ಣ ಪುಟ್ಟ ಗುಡಿಸಲುಗಳಲ್ಲಿ ವಾಸಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಬಂದಿದ್ದಲ್ಲಿ, ಎಲ್ಲಾ ಗುಡುಸಲು ವಾಸಿಗಳಿಗೆ ನಿವೇಶನ ನೀಡಿ ಶಾಶ್ವತ ಮನೆ ನಿರ್ಮಾಣ ಮಾಡಿಕೊಡುವುದರ ಮೂಲಕ ಗುಡಿಸಲು ರಹಿತ ರಾಜ್ಯವನ್ನಾಗಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಇ) ಗ್ರಾಮೀಣ ಪ್ರದೇಶದ ಬಹಳಷ್ಟು ಕಡೆ ಸರ್ಕಾರಿ ಜಮೀನು ಲಭ್ಯವಿಲ್ಲದೆ ಕಡು ಬಡವರು ನಿವೇಶನ ಪಡೆಯಲು ಸಾಧ್ಯವಿಲ್ಲದಿರುವುದರಿಂದ ಸರ್ಕಾರ ಸ್ಥಳೀಯ ಮಾರುಕಟ್ಟೆ ಬೆಲೆಗೆ ಜಮೀನು ಕೊಂಡು ನಿವೇಶನಗಳನ್ನಾಗಿ ಮಾರ್ಪಡಿಸಿ ಅರ್ಹ ಫಲಾನುಭವಿಗಳನ್ನು ಗುರ್ತಿಸಿ ನಿವೇಶನಗಳನ್ನು ಹಂಚಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಈ) ಹಾಗಿದ್ದಲ್ಲಿ ಯಾವ ಅವಧಿಯೊಳಗಾಗಿ ಪೂರ್ಣ ಪ್ರಮಾಣದ ಕ್ರಮವನ್ನು ಸರ್ಕಾರ ಕೈಗೊಂಡು ನಿವೇಶನ ಮತ್ತು ವಸತಿ ರಹಿತ ಫಲಾನುಭವಿಗಳಿಗೆ ಸೌಲಭ್ಯಗಳನ್ನು ಕಲ್ಪಿಸಲಾಗುವುದು

ಶ್ರೀ ಡಿ ಟಿ ಜಯಕುಮಾರ್

ಅ)ಹೌದು

ಆ) ಗ್ರಾಮೀಣ ಭಾಗದಲ್ಲಿರುವ ವಸತಿರಹಿತರ ಮತ್ತು ನವೇಶನ ರಹಿತರ ಸಮೀಕ್ಷೆಯನ್ನು 2003ರ ಮೇ ಜೂನ್‌ನಲ್ಲಿ ಗ್ರಾಮ ಪಂಚಾಯಿತಿಗಳ ಮುಖಾಂತರ ನಡೆಸಲಾಗಿದ್ದು ಸಮೀಕ್ಷೆ ಪ್ರಕಾರ ಒಟ್ಟು 1042986 ನಿವೇಶನ ರಹಿತರು ಹಾಗು 1226345 ವಸತಿ ರಹಿತರು ಇರುವುದು ತಿಳದು ಬಂದಿದೆ

ಸಮೀಕ್ಷೆ ನಂತರ ಇಲ್ಲಿಯವರೆಗೂ ವಿವಿಧ ವಸತಿ ಯೋಜನೆಗಳಲ್ಲಿ 1022908 ಮನೆಗಳನ್ನು ಹಾಗು 21248 ನಿವೇಶನಗಳನ್ನು ನೀಡಲಾಗಿರುತ್ತದೆ

ಆ) ಗ್ರಾಮೀಣ ಪ್ರದೇಶದಲ್ಲಿ ಸರ್ಕಾರಿ ಜಮೀನು ಲಭ್ಯವಿಲ್ಲದಿದ್ದ ಸಂದರ್ಭದಲ್ಲಿ ಖಾಸಗಿ ಜಮೀನು ಕೊಂಡುಕೊಳ್ಳಲು ಅವಕಾಶವಿದ್ದು ಇಂತಹ ಸಂದರ್ಭದಲ್ಲಿ ಮಾರ್ಗಸೂಚಿ ಬೆಲೆ +20% ರಷ್ಟು ಹೆಚ್ಚಳದಲ್ಲಿ ಜಮೀನು ಖರೀದಿಗೆ ಅವಕಾಶ ಕಲ್ಪಿಸಲಾಗಿದೆ

ಇ) ಪ್ರತಿ ವರ್ಷವೂ ಈ ಬಗ್ಗೆ ಗುರಿ ಇಟ್ಟುಕೊಳ್ಳಲಾಗಿದ್ದು ಅದರಂತೆ ಫಲಾನುಭವಿಗಳಿಗೆ ಪೂರ್ಣ ಪ್ರಮಾಣದ ಸೌಲಭ್ಯ ಕಲ್ಪಿಸಲಾಗುವುದು

ಶ್ರೀ ನಿಂಗಪ್ಪ ಹೆಚ್ (ಕುಣಿಗಲ್)119(225)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

1) ತುಮಕೂರು ಸರ್ಕಾರಿ ಮುದ್ರಣಾಲಯದಲ್ಲಿ ಸಾಕಷ್ಟು ಅವ್ಯವಹಾರಗಳು ನಡೆದು ಸರ್ಕಾರಕ್ಕೆ ಭಾರಿ ಪ್ರಮಾಣದ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

2) ಬಂದಿದ್ದಲ್ಲಿ, ಪೂರ್ಣ ಪ್ರಮಾಣದ ತನಿಖೆ ನಡೆಸಲು ಸರ್ಕಾರ ಕ್ರಮ ಕೈಗೊಳ್ಳುವುದೇ,

3) ಮುದ್ರಣಾಲಯದಲ್ಲಿರುವ ಲಕ್ಷಾಂತರ ರೂಪಾಯಿ ಬೆಲೆಬಾಳುವ ಯಂತ್ರಗಳು ಧೂಳು ತಿನ್ನುತ್ತಿದ್ದು ಖಾಸಗಿಯವರಿಗೆ ಗುತ್ತಿಗೆ ನೀಡಿ ಅವರು ತಯಾರಿಸುತ್ತಿರುವ ಪುಸ್ತಕಗಳ ಮೇಲೆ ಸರ್ಕಾರಿ ಮುದ್ರಣಾಲಯದ ಹೆಸರು ನಮೂದಿಸುತ್ತಿರುವುದು ಗಮನಕ್ಕೆ ಬಂದಿದೆಯೇ?